**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಾಮರಾಜನಗರ.**

**ಸಿ.ಸಿ. ನಂ. 533/2025**

ಫಿರ್ಯಾದಿ : ರಾಜ್ಯದ ಪರವಾಗಿ ಸಂಚಾರ ಪೊಲೀಸ್ ಠಾಣೆ,
ಚಾಮರಾಜನಗರ

**ವಿರುದ್ಧ**

ಆರೋಪಿ : ಸಿದ್ದರಾಜು ಬಿನ್ ಗಣೇಶನಾಯ್ಕು,
ವಯಸ್ಸು 28 ವರ್ಷ,ಸರ್ವೇಯರ್ ಕೆಲಸ,
ವಾಸಃ ದೊಡ್ಡಮೂಡಹಳ್ಳಿ ಗ್ರಾಮ,
ಚಾಮರಾಜನಗರ ತಾಲ್ಲೂಕು.

**ಆಪಾದನೆ**

ದಿಃ 07.04.2025 ರಂದು ಸಂಃ 5.15 ಗಂಟೆ ಸಮಯದಲ್ಲಿ ಚಿನ್ನಯ್ಯರವರು ತಮ್ಮ ಮಗನನ್ನು ನೋಡಲು ಗಾಳಿಪುರಕ್ಕೆ ಬಂದು ಮಾತನಾಡಿಸಿ ಚಾಮರಾಜನಗರ ಸತ್ಯಮಂಗಲ ಮುಖ್ಯ ರಾಷ್ಟ್ರೀಯ ಹೆದ್ದಾರಿಯ ಡಿಲ್ಲಿ ಡರ್ಬಾರ್ ಹತ್ತಿರ ನಡೆದುಕೊಂಡು ಮತ್ತೆ ಸಾಕ್ಷಿ-2 ಮಗನ ಮನೆಗೆ ಹೋಗುತ್ತಿದ್ದಾಗ ಆರೋಪಿಯಾದ ನೀವು TN-93-F-0418ರ ಟಿ.ವಿ.ಎಸ್ ರೇಡಾನ್ ಮೋಟಾರ್ ಬೈಕನ್ನು ಅತಿವೇಗ ಮತ್ತು ಅಜಾರೂಗತೆಯಿಂದ ಚಾಲನೆ ಮಾಡಿ ನಿಯಂತ್ರಣ ತಪ್ಪಿನಡೆದುಕೊಂಡು ಹೋಗುತ್ತಿದ್ದ ಚಿನ್ನಯ್ಯರವರಿಗೆ ಡಿಕ್ಕಿ ಪಡಿಸಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.281ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

2. ಅದೇ ದಿನ ಅದೇ ಸ್ಥಳದಲ್ಲಿ ಆರೋಪಿಯಾದ ನೀವು TN-93-F-0418ರ ಟಿ.ವಿ.ಎಸ್ ರೇಡಾನ್ ಮೋಟಾರ್ ಬೈಕನ್ನು ಅತಿವೇಗ ಮತ್ತು ಅಜಾರೂಗತೆಯಿಂದ ಚಾಲನೆ ಮಾಡಿ ನಿಯಂತ್ರಣ ತಪ್ಪಿ ನಡೆದುಕೊಂಡು ಹೋಗುತ್ತಿದ್ದ ಚಿನ್ನಯ್ಯರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ತಲೆಯ ಹಿಂಭಾಗಕ್ಕೆ ಹಾಗೂ ಕತ್ತಿನ ಹತ್ತಿರ ಗಾಯವಾಗಿದ್ದು, ಗಾಯಾಳುವನ್ನು ಜಿಲ್ಲಾಆಸ್ಪತ್ರೆಗೆ ಹಾಗೂ ಮೈಸೂರಿನ ಕೆ.ಆರ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಡಿಸ್

ಚಾರ್ಜ್ ಮಾಡಿಸಿಕೊಂಡು ಕೋಡಿಉಗನೆ ಗ್ರಾಮದಲ್ಲಿ ಇರುವಾಗ ದಿಃ 19.05.2025ರ ಬೆಳಗಿನ ಜಾವ 01.00 ಗಂಟೆ ಸಮಯದಲ್ಲಿ ಚೆನ್ನಯ್ಯರವರು ಮೃತರಾಗಿದ್ದು, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ.106(1) ರ ಅಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

**ಪ್ರಶ್ನೆಃ 1.** ಓದಿ ಹೇಳಿದುದು ಅರ್ಥವಾಯಿತೇ?
**ಉತ್ತರಃ** ಹೌದು

**ಪ್ರಶ್ನೆಃ 2.** ಶಿಕ್ಷೆಗೆ ಒಪ್ಪುತ್ತೀರೋ ಅಥವಾ ವಿಚಾರಣೆಯಾಗಬೇಕಾ?
**ಉತ್ತರಃ** ವಿಚಾರಣೆ ಆಗಬೇಕು.

ಮೇಲಿನ ಆಪಾದನೆಯನ್ನು ಆರೋಪಿಗೆ ಓದಿ ವಿವರಿಸಲಾಗಿ, ಆರೋಪಿ ಅರ್ಥಮಾಡಿಕೊಂಡು ನೀಡಲಾದ ಉತ್ತರವನ್ನು ನಾನು ನನ್ನ ಸ್ವ-ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢೀಕರಿಸಿರುತ್ತೇನೆ.

ದಿನಾಂಕಃ 29.12.2025.

(ಪ್ರಕಾಶ್ ಸಿ.ಡಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಸಿ.ಜೆ.ಎಂ.,
ಚಾಮರಾಜನಗರ.

ಆರೋಪಿಯ ಸಹಿಃ